## ಕರ್ನಾಟಕದ ಆಧ್ಯಾತ್ಮಿಕ ಪರಂಪರೆ


# ಶ್ರೀವ್ಯಾಸರಾಯರು – ಜೀವನ ಮತ್ತು ಕೃತಿಗಳು : ಒಂದು ವಿಹಂಗಮ ನೋಟ

ಡಾ. ಎನ್. ಕೆ. ರಾಮಶೇಷನ್

ಕನ್ನಡ ಸಾಹಿತ್ಯದ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸದಲ್ಲಿ ಮೂಡಿಬಂದ 'ವಚನ ಸಾಹಿತ್ಯ ಸಂಪದ' ಮತ್ತು 'ಕೀರ್ತನ ಅಥವಾ ಹರಿದಾಸ ಸಾಹಿತ್ಯ ಸಂಪದ' ಗಳು ಕನ್ನಡ ಶಾರದೆಯ ಎರಡು ಕಣ್ಣುಗಳಿದ್ದಂತೆ ಎಂಬುದಾಗಿ ಹಿರಿಯ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇದು ದಿಟವೆಂಬುದು ಈ ಎರಡೂ ಸಾಹಿತ್ಯ ರಚನೆಗಳ ಅಳವು, ಸತ್ವ, ಹಿರಿಮೆ, ವೈದೃಶ್ಯ, ವೈಶಿಷ್ಟ್ಯ ಕುರಿತಂತೆ ಅಧ್ಯಯನ ನಡೆಸಿದಾಗಲೇ ತಿಳಿಯುವಂತಹುದು! ಈ ಎರಡೂ ಸಾಹಿತ್ಯರೂಪ ಅಥವಾ ಪ್ರಕಾರಗಳಲ್ಲಿ ಕೆಲವು ಸಾಮ್ಯಾಂಶಗಳಿರುವುದನ್ನು ನಾವು ಕಾಣಬಹುದು.

ಹರಿದಾಸ ಸಾಹಿತ್ಯದ ಹಿನ್ನಲೆಯಲ್ಲಿ ಶ್ರೀವ್ಯಾಸರಾಯರ ಕೊಡುಗೆಯನ್ನು ಗಮನಿಸಿದಾಗ, ಅವರು ಪಂಡಿತ ಸಮುದಾಯವಾದ ವ್ಯಾಸಕೂಟವನ್ನು (ಸಂಸ್ಕೃತಪ್ರಿಯ ವಿದ್ವಾಂಸರ ಒಕ್ಕೂಟ) ಸಂಘಟಿಸಿದಂತೆಯೇ, ಅಷ್ಟೇ ಪ್ರೀತಿಯಿಂದ (ಅದು ಕನ್ನಡ ಪ್ರೀತಿ!) ದಾಸಕೂಟವನ್ನೂ (ಹರಿದಾಸರ ಸಮೂಹ) ಸಂಘಟಿಸಿದರು ಎಂಬ ಅಂಶವನ್ನು ಗಮನಿಸಬಹುದು. ಈವರೆಗೆ ಗಹನವೆನಿಸಿದ್ದ ವೇದಾಂತತತ್ತ್ವಗಳನ್ನು ಸರಳ ಕನ್ನಡ ನುಡಿಗಟ್ಟುಗಳಲ್ಲಿ ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ ಮಾಡಿದ ಹರಿದಾಸರಿಗೆ ಪ್ರಾಧಾನ್ಯತೆ ನೀಡಿದ್ದು ವ್ಯಾಸರಾಯರ ಗರಿಮೆ. ಸ್ವಯಂ ವ್ಯಾಸರಾಯರೇ ತಮ್ಮ ವಿದ್ಯಾಗುರುಗಳಾದ ಶ್ರೀಪಾದರಾಜರ ರಚನೆಗಳನ್ನು ಹಾಡುತ್ತಿದ್ದರು; ತಾವೂ ಕೀರ್ತನೆಗಳನ್ನು ರಚಿಸಿದರು. ಪುರಂದರ, ಕನಕ, ಸೋದೆಯ ವಾದಿರಾಜರು, ಬೇಲೂರಿನ ಹಿರಿಯ ಶ್ರೀವೈಷ್ಣವ ಹರಿದಾಸರಾದ ಶ್ರೀ ವೈಕುಂಠದಾಸರು – ಹೀಗೆ ಅನೇಕ ಹರಿದಾಸರಿಗೆ ಮತ್ತು ಮಠಾಧೀಶರಿಗೆ ಗುರುವರ್ಯರೆನಿಸಿದರು. ವ್ಯಾಸರಾಯರು ಬದುಕಿ ಬಾಳಿದ ಅವಧಿಯನ್ನು ಹರಿದಾಸ ಸಾಹಿತ್ಯದ ಸೃಜನಾತ್ಮಕ ಯುಗ, ಸುವರ್ಣ ಯುಗ ಎಂದೆಲ್ಲ ವಿದ್ವಾಂಸರು ಗುರುತಿಸುತ್ತಾರೆ.

ವ್ಯಾಸರಾಯರ ಹುಟ್ಟಿದೂರು ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲೂಕಿನ ಬನ್ನೂರು ಗ್ರಾಮ. ಅದು ಕಾವೇರಿ ತಟದಲ್ಲಿದೆ. ತಂದೆ ಬಲ್ಲಣ್ಣ ಸುಮತಿ, ತಾಯಿ ಲಕ್ಷ್ಮೀದೇವಿ. ವ್ಯಾಸರಾಯರು ಹುಟ್ಟಿದ್ದು ಬ್ರಹ್ಮಣ್ಯತೀರ್ಥರೆಂಬ ಮಹಾನುಭಾವರ ಅನುಗ್ರಹದಿಂದ. ಅವರು ಶಿಶು ಜನಿಸುವ ಸಮಯದಲ್ಲಿ, ಆ ಶಿಶುವನ್ನು ತಮಗೆ ನೀಡಬೇಕೆಂದು ತಂದೆತಾಯಿಗಳಿಗೆ ಸೂಚಿಸಿದ್ದರು. ಕಾಲಕ್ರಮೇಣ ಅವರೇ ತಮ್ಮ ಮಠದಲ್ಲಿಯೇ ಹುಡುಗನಿಗೆ ವಿದ್ಯಾಭ್ಯಾಸವನ್ನೂ ಕೊಡಿಸಿದರು. ಅನಂತರ ಹದಿನಾರನೆಯ ವಯಸ್ಸಿಗೆ ಸಾಹಿತ್ಯ, ವ್ಯಾಕರಣ, ಛಂದಸ್ಸು ಮತ್ತು ಮಧ್ವಶಾಸ್ತ್ರಗಳ ಪಾಠ ನಡೆಯಿತು.



ವಿಶಿಷ್ಟ ಸಂಗತಿಯೇನೆಂದರೆ, ಅವರಿಗೆ ಸ್ವಪ್ನದಲ್ಲಿಯೇ ಸಂನ್ಯಾಸಸ್ವೀಕಾರಕ್ಕೆ ನಿರ್ದೇಶನ ದೊರಕಿತಂತೆ! ಅದರಂತೆ ಸಂತೋಷದಿಂದಲೇ ಬ್ರಹ್ಮಣ್ಯತೀರ್ಥರು ಬಾಲಕನಿಗೆ ಸಂನ್ಯಾಸಾಶ್ರಮವಿತ್ತು, 'ವ್ಯಾಸರಾಜ' ರೆಂಬ ನಾಮಾಂಕಿತವನ್ನು ನೀಡಿದರು.

ಅನಂತರ, ವ್ಯಾಸರಾಜರು ಮುಳಬಾಗಿಲಿನ ಶ್ರೀ ಶ್ರೀಪಾದರಾಜರಲ್ಲಿಗೆ ಹೋದರು. ಆ ಮಿಲನವೇ ಮುಂದೆ ಕನ್ನಡ ಸಾಹಿತ್ಯಕ್ಕೆ ದಾಸಸಾಹಿತ್ಯದ ಗಂಗೆಯನ್ನು ಹರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿತು.

ವ್ಯಾಸರಾಜರು ಹನ್ನೆರಡು ವರ್ಷಗಳ ಕಾಲ ಶ್ರೀಪಾದರಾಜರ ಬಳಿ ಶಿಕ್ಷಣ ಪಡೆದರು. ವ್ಯಾಸರಾಜರದು ಅದ್ಭುತ ಸ್ಮರಣ ಶಕ್ತಿ ಮತ್ತು ವಿಶ್ಲೇಷಣಾ ಶಕ್ತಿ. ಈಗಲೂ ವ್ಯಾಸರಾಜರು ಧ್ಯಾನ ಮಾಡುತ್ತಿದ್ದ ಗುಹೆಯನ್ನು ಮುಳಬಾಗಿಲಿನ ನೃಸಿಂಹತೀರ್ಥದ ಪರಿಸರದಲ್ಲಿ ಕಾಣಬಹುದು. ಈ ಅವಧಿಯಲ್ಲಿ ಹಲವಾರು ಅದ್ಭುತ ಪ್ರಸಂಗಗಳು ನಡೆದವು. ಅವುಗಳಲ್ಲಿ ಒಂದನ್ನು ಇಲ್ಲಿ ಉದಾಹರಿಸಬಹುದು.

ಒಮ್ಮೆ ಕಾರಣಾಂತರದಿಂದ, ಶ್ರೀಪಾದರಾಜರು ಪೂಜಾಕಾರ್ಯವನ್ನು ಶ್ರೀವ್ಯಾಸರಾಜರಿಗೆ ನಿರ್ವಹಿಸಿದ್ದರು. ಅವರು ಗೋಪಾಲಕೃಷ್ಣ ದೇವರ ವಿಗ್ರಹ ಇರಿಸಿದ್ದ ಸಂಪುಟವನ್ನು ತೆರೆದಾಗ, ಕೃಷ್ಣನ ರೂಪವು ಕಂಡುಬಂದು ಅದು ಮೋಹಕವಾಗಿ ನರ್ತಿಸಲಾರಂಭಿಸಿತಂತೆ. ವ್ಯಾಸರಾಜರು ಸಾಲಿಗ್ರಾಮ ಶಿಲೆಗಳನ್ನೇ ತಾಳವಾಗಿ ಬಡಿಯುತ್ತ, "ಕಾಳಿಂಗನಾ ಮೆಟ್ಟಿ ನಾಟ್ಯವಾಡಿದ ಕಂಜನಾಭ ಕೃಷ್ಣನು!" ಎಂಬ ಕೀರ್ತನೆಯನ್ನು ಹಾಡಿ ನಲಿದಾಡಿದರಂತೆ! ಶ್ರೀಪಾದರಾಜರು ಬಂದು ನೋಡಿದಾಗ, ಕೃಷ್ಣನು ಮತ್ತೆ ವಿಗ್ರಹರೂಪಿಯಾದನು. ಇದನ್ನು ಕಂಡು, ಶ್ರೀಪಾದರಾಜರು ತಮ್ಮ ಶಿಷ್ಯ ಮಹಾತಪಸ್ವಿ, ಕೃಷ್ಣಭಕ್ತನೆಂದು ಅರಿತರು.

ಅನಂತರ ವ್ಯಾಸರಾಯರು ಬ್ರಹ್ಮಣ್ಯತೀರ್ಥರ ಉತ್ತರಾಧಿಕಾರಿಗಳಾದರು; ವಿಜಯನಗರದ ಅರಸರಿಗೆ ರಾಜಗುರುಗಳೂ ಆದರು. ಉತ್ತರ ಭಾರತದಲ್ಲಿ ಪರ್ಯಟನ ಮಾಡಿ, ಬಂಗಾಲದ ಶ್ರೀಕೃಷ್ಣ ಚೈತನ್ಯರ ಸಂಪ್ರದಾಯಕ್ಕೂ ಸ್ಫೂರ್ತಿ ನೀಡಿದರು. ಅದಲ್ಲದೆ, ತಿರುಪತಿಯ ದೈವ ವೆಂಕಟೇಶ್ವರ ಸ್ವಾಮಿಯನ್ನು ಹನ್ನೆರಡು ವರ್ಷಗಳ ಕಾಲ ಆರಾಧಿಸಿದರು.

---

ಡಾ. ರಾಮಶೇಷನ್ ಅವರು ಸಂಸ್ಕೃತದಲ್ಲಿ ವಿದ್ವಾಂಸರು; ಮೈಸೂರು ನಿವಾಸಿಗಳಾದ ಇವರು ದಾಸಸಾಹಿತ್ಯದಲ್ಲಿ ಕೂಡ ಪಾರಂಗತರು.

ಹಾಗೂ ಅವರೊಬ್ಬ ಉನ್ನತ ದಾರ್ಶನಿಕರೂ ಆಗಿದ್ದರೆಂದು ವಿದ್ವತ್ಪ್ರಪಂಚ ಗುರುತಿಸಿದೆ. ಅವರು ರಚಿಸಿರುವ **ನ್ಯಾಯಾಮೃತ, ತರ್ಕತಾಂಡವ, ತಾತ್ಪರ್ಯ ಚಂದ್ರಿಕಾ** ಮುಂತಾದ ಗ್ರಂಥಗಳು ಮಧ್ವಸಿದ್ಧಾಂತದ ತ್ರಿರತ್ನಗಳಿದ್ದಂತೆ ಇವೆ. ವ್ಯಾಸರಾಜರ ಮಹಿಮೆಯನ್ನು ಪುರಂದರ ದಾಸರು ಹೀಗೆ ಕೊಂಡಾಡಿದ್ದಾರೆ:

**ವ್ಯಾಸರಾಯರ ಚರಣಕಮಲವೆನಗೇಸು**
**ಜನ್ಮದ ಸುಕೃತ ಫಲದಿ ದೊರೆತಿತೋ ಎನ್ನ**
**ಸಾಸಿರ ಕುಲಕೋಟಿ ಪಾವನ್ನವಾಯಿತೋ ...**
**ಶ್ರೀಶನ್ನ ಭಜಿಸುವುದಕಧಿಕಾರಿ ನಾನಾದೆ**
**ದೋಷರಹಿತನಾದ ಪುರಂದರವಿಠಲನ**
**ದಾಸರ ಕರುಣವೆನ್ನ ಮೇಲೆ ಇರಲಾಗಿ....**

ವ್ಯಾಸರಾಜರು ಉತ್ತರ ಭಾರತದಲ್ಲಿ ಸಂಚರಿಸಿ, ಅಂದಿನ ಪ್ರಸಿದ್ಧ ವಿದ್ವಾಂಸರಾದ ಕಾಶೀ ಮಿಶ್ರ, ಪಕ್ಷಧರ ಮಿಶ್ರ ಮೊದಲಾದ ವಿದ್ವಾಂಸರನ್ನು ಪರಾಭವಗೊಳಿಸಿದರೆಂಬ ಐತಿಹ್ಯವಿದೆ.

ಕಾಂಚೀ ಪಟ್ಟಣದಲ್ಲಿ ಶ್ರೀವ್ಯಾಸರಾಜರು ತಮ್ಮ ಒಂದು ಸುಪ್ರಸಿದ್ಧ ಶ್ಲೋಕವೊಂದನ್ನು ರಚಿಸಿದರು. ಮಧ್ವಸಿದ್ಧಾಂತದ ಒಂಭತ್ತು ತತ್ತ್ವಾಂಶಗಳನ್ನು ಸಂಗ್ರಹಿಸಿರುವ ಆ ಶ್ಲೋಕವನ್ನು 'ನವರತ್ನಮಾಲೆ' ಎಂದು ಕರೆಯುತ್ತಾರೆ.

ವ್ಯಾಸರಾಜರಿಗೆ ಸಾಮಾನ್ಯ ಜನರ ಮೇಲಿದ್ದ ಕರುಣೆ ಅಪಾರವಾದುದು. ಅದಕ್ಕೆ ನಿದರ್ಶನ ಎಂದರೆ ಅವರ ಕೀರ್ತನೆಗಳು. ಅಲ್ಲಿ ಅಭಿವ್ಯಕ್ತವಾಗಿರುವ ಕವಿಹೃದಯ, ಹರಿಭಕ್ತಿ, ತತ್ತ್ವಪ್ರತಿಪಾದನೆ, ಗೋಪಿಕಾಭಾವ, ಆಂತರಿಕ ನಿವೇದನೆ, ಕೃಷ್ಣಲೀಲಾನುಭವದ ಪ್ರಸಂಗಗಳು – ಇವುಗಳೆಲ್ಲದರಲ್ಲೂ ವ್ಯಾಸರಾಜರ ಪರಿಶುದ್ಧ ಭಕ್ತ ಹೃದಯ ಪ್ರಕಟವಾಗುತ್ತದೆ.

ತಮ್ಮ ತಾತ್ಪರ್ಯ ಚಂದ್ರಿಕಾ ಎಂಬ ಗ್ರಂಥದಲ್ಲಿ ವ್ಯಾಸರಾಜರು ತಮ್ಮ ವಿದ್ಯಾಗುರುಗಳಾದ ಶ್ರೀಪಾದರಾಜರನ್ನು ಹೀಗೆ ಪ್ರಶಂಸಿಸುತ್ತಾರೆ:

**ಪದವಾಕ್ಯ ಪ್ರಮಾಣಾಬ್ಧಿ ವಿಕ್ರೀಡನ ವಿಶಾರದಾನ್ ।**
**ಲಕ್ಷ್ಮೀನಾರಾಯಣಮುನಿಂ ವಂದೇ ವಿದ್ಯಾಗುರೂನ್ ಮಮ ॥**

ಪದ, ವಾಕ್ಯ, ಪ್ರಮಾಣಗಳ ಸಾಗರದಲ್ಲಿ ವಿಹರಿಸುತ್ತಿರುವ ಲಕ್ಷ್ಮೀನಾರಾಯಣ ಎಂಬ ಹೆಸರಿನವರಾದ, ನನ್ನ ವಿದ್ಯಾಗುರುಗಳಾದ ಶ್ರೀಪಾದರಾಜರಿಗೆ ನಮಸ್ಕಾರ.

ಸ್ವಾರಸ್ಯಕರವೋ ಎಂಬಂತೆ, ಶ್ರೀಪಾದರಾಜರೂ ಕೂಡ ತಮ್ಮ ಪ್ರಿಯಶಿಷ್ಯನನ್ನು ಕೆಳಗಿನ ಕನ್ನಡ ನುಡಿಗಳಲ್ಲಿ ಹೊಗಳಿದ್ದಾರೆ: **'ಇದಿರದಾವನು ವ್ಯಾಸ ಮುನಿರಾಯ ನಿನಗೀ ಧರೆಯೊಳು.'**

ವ್ಯಾಸರಾಜರು ಉದಾರಿಗಳು. ಒಮ್ಮೆ ಶ್ರೀರಂಗಕ್ಷೇತ್ರದಲ್ಲಿ ಶೈವ ಮತ್ತು ಶ್ರೀವೈಷ್ಣವ ದೇವಾಲಯಗಳ ಎಲ್ಲೆಯನ್ನು ಕುರಿತಂತೆ ವಾದವಿವಾದ ಪ್ರಬಲಗೊಂಡು, ಪ್ರಕೋಪಕ್ಕೆ ಹೋಯಿತು. ಆಗ ವ್ಯಾಸರಾಜರು ಅದನ್ನು ಬಹಳ ಸರಳವಾಗಿ ತೀರ್ಮಾನಿಸಿದರಂತೆ.

ಅನಂತರ ವ್ಯಾಸರಾಜರು ಉಡುಪಿಗೆ ಬಂದರು. ಅಲ್ಲಿಂದ ವಿಜಯನಗರಕ್ಕೆ ಬಂದು ರಾಜಗುರುವಾಗಿ ಮುಂದುವರಿದರು; ಅನೇಕ ದೇವತಾಮೂರ್ತಿಗಳನ್ನು ಸಂಸ್ಥಾಪಿಸಿದರು. ವ್ಯಾಸರಾಜರನ್ನು ಇತರ ಸಂಪ್ರದಾಯದ ವಿದ್ವಾಂಸರೂ, ಗಣ್ಯರೂ ಗೌರವಿಸುತ್ತಿದ್ದರು. ಕಳಿಂಗ ದೇಶದಿಂದ ಬಂದ ಬಸವ ಭಟ್ಟ ಎಂಬ ವಿದ್ವಾಂಸನು ಅವರ ಜೊತೆ ಒಂದು ತಿಂಗಳ ಕಾಲ ವಾದವಿವಾದ ನಡೆಸಿ, ಸೋಲನ್ನೊಪ್ಪಿಕೊಂಡು ತನ್ನಲ್ಲಿದ್ದ ಅಪೂರ್ವವಾದ ಪಚ್ಚೆ ಶಿವಲಿಂಗವನ್ನು ಸಮರ್ಪಿಸಿದನು. ವ್ಯಾಸರಾಯರೂ ಕೂಡ, ಬಸವಭಟ್ಟನನ್ನು ಔದಾರ್ಯದಿಂದ ಬಹುಮಾನಿಸಿದರು. ಇಂದೂ ವ್ಯಾಸರಾಯರ ಮಠದಲ್ಲಿ ಶಿವರಾತ್ರಿಯಂದು ಈ ಪಚ್ಚೆಲಿಂಗಕ್ಕೆ ಪೂಜೆ ಸಲ್ಲುತ್ತದೆ.

ಶ್ರೀಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯವು ವೈಭವದಿಂದ ಮೆರೆಯಿತು. ಆ ಅವಧಿಯಲ್ಲಿ ಅಲ್ಲಿಗೆ ಭೇಟಿಕೊಟ್ಟ ಪೇಸ್ (Paes) ಎಂಬ ವಿದೇಶೀಯನು ಅತ್ಯಂತ ಗೌರವಾನ್ವಿತನಾದ ಬ್ರಾಹ್ಮಣನಿಂದ ಕೃಷ್ಣದೇವರಾಯನು ಆಶೀರ್ವಾದ ಪಡೆಯುತ್ತಿದ್ದನು ಎಂದು ಬರೆದಿದ್ದಾನೆ. ಅವನು ಶ್ರೀವ್ಯಾಸರಾಜರನ್ನೇ ಉಲ್ಲೇಖಿಸಿರುವನೆಂಬುದು ನಿಸ್ಸಂದೇಹ.

(ಮುಂದಿನ ತಿಂಗಳು: ಶ್ರೀವ್ಯಾಸರಾಜರ ಕೃತಿಗಳು)

---

## ಚಿಂತನ ಪ್ರಭ

### ಶಮದಿಂದ ಶಾಂತಿ

ನಿಜವಾದ ಶಾಂತಿಗೆ ಮುನ್ನ ಮನುಷ್ಯ ಶಮವನ್ನು (ಶರೀರ ಮತ್ತು ಮಾನಸಿಕ ನಿಯಂತ್ರಣ) ಸಾಧಿಸಬೇಕಾಗುತ್ತದೆ. ಶಮವಿಲ್ಲದ ಶಾಂತಿ ಬರಿಯ ಭ್ರಾಂತಿ. ವ್ಯಷ್ಟಿಗಳು ಸೇರಿ ಸಮಷ್ಟಿಯಾಗಿದೆ. ಸಮಷ್ಟಿಯೂ ಅನೇಕ ವ್ಯಷ್ಟಿಗಳಾಗಿ ಮೈದೋರಿದೆ. ಆದ್ದರಿಂದ ವ್ಯಷ್ಟಿ ವ್ಯಷ್ಟಿಯೂ ತನ್ನಲ್ಲಿ ಶಮವನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿದರೆ, ಸಮಷ್ಟಿಯ ಶಮಕ್ಕೆ ಬಲವಾದ ತಳಹದಿಯಾಗುತ್ತದೆ. ವ್ಯಷ್ಟಿ ವ್ಯಷ್ಟಿಗಳ ಅಹಂಕಾರ ಶಮನವಾದರೆ, ಸಮಷ್ಟಿ ಸಮಷ್ಟಿಗಳ ಅಹಂಕಾರವೂ ಶಮನವಾಗುವುದು ಸಾಧ್ಯ. ದೇಶಭಕ್ತಿ, ರಾಷ್ಟ್ರೀಯತೆ, ಸ್ವಮತ, ಸ್ವಸಂಸ್ಕೃತಿ, ಸ್ವಭಾಷಾಭಿಮಾನಗಳೆಲ್ಲ ಅಹಂಕಾರಮೂಲವಾದ ವ್ಯಷ್ಟಿ ಪ್ರತಿಷ್ಠೆಯ ಸಮಷ್ಟಿರೂಪಗಳಲ್ಲದೆ ಮತ್ತೇನು? ಆದ್ದರಿಂದ ವ್ಯಷ್ಟಿ ವ್ಯಷ್ಟಿಗಳಲ್ಲಿ ಅಂತಹ ಶಮಸಾಧನೆಯಿಂದ ಮಾಡುವ ಮೂಲ ಪರಿವರ್ತನೆಗಾಗಿ, ನಾವು ಸಾಮೂಹಿಕವಾಗಿ ಕಾರ್ಯೋನ್ಮುಖರಾಗದಿದ್ದರೆ, ಬರಿಯ ಅರ್ಥಶಾಸ್ತ್ರದ ಅಥವಾ ರಾಜಕೀಯಶಾಸ್ತ್ರದ ತೇಪೆ ಹಾಕುವ ಕುಶಲಕರ್ಮದಿಂದ ಎಂದಿಗೂ ಸರ್ವರೂ ಅಪೇಕ್ಷಿಸುವ ಸಮಷ್ಟಿ ಶಾಂತಿ ಸಿದ್ಧಿಸುವುದಿಲ್ಲ. ಸ್ವಭಾವ ಬದಲಾಯಿಸದೆ, ಬದುಕು ಬದಲಾಯಿಸುವುದಿಲ್ಲ. ಅಂತಹ ಬದಲಾವಣೆಗಾಗಿ ಲೋಕಶೋಷಣೆ ಮಾಡಬೇಕಾಗಿಲ್ಲ. ನಮ್ಮ ಸ್ವರೂಪದಲ್ಲಿಯೇ ಆ ದೈವೀಶಕ್ತಿ ಸುಪ್ತವಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಅದನ್ನು ಎಚ್ಚರಗೊಳಿಸಲು ಪ್ರಯತ್ನ ಮಾಡಿದರೆ, ಲೋಕಕಲ್ಯಾಣಕ್ಕೆ ಪ್ರತ್ಯಕ್ಷವಾಗಿ ಸಕ್ರಿಯವಾಗಿ ನೆರವಾಗುತ್ತಾನೆ. ಈ ದೈವೀ ಸ್ವರೂಪವೇ ಸ್ವಭಾವವಾದರೆ, ಅದನ್ನು ಅನುಷ್ಠಾನಕ್ಕೆ ತರುವ ಸ್ವಧರ್ಮ ಸ್ವತಃಸಿದ್ಧವಾಗಿ, ತದನುಗುಣವಾದ ಸ್ವಕರ್ಮದಲ್ಲಿ ಸುಪ್ರತಿಷ್ಠಿತವಾಗಿಯೇ ಆಗುತ್ತದೆ. ಪುರಾತನ ಮಹರ್ಷಿಗಳೆಲ್ಲರಿಂದಲೂ ಒಂದಲ್ಲ ಒಂದು ರೀತಿಯಿಂದ ಘೋಷಿತವಾಗುತ್ತಲೇ ಬಂದಿರುವ ಈ ಪುರಾತನ ಸತ್ಯವು ನಮ್ಮ ಅರ್ವಾಚೀನ ವಿಭೂತಿಗಳಿಂದ ಮತ್ತೊಮ್ಮೆ ಆಧುನಿಕವಾಗಿ ಮಹೋಜ್ವಲವಾಗಿ ಪ್ರಕಾಶಿತವಾಗಿದೆ.

– ಶ್ರೀ ಕುವೆಂಪು (ವಿಭೂತಿಪೂಜೆ)